ಆದರೆ ಏನು ಮಾಡೋದು? ಲಂಚ ಹೊಡಿಯೋದು ಪಾಪ ಅಂತ ಗೊತ್ತಾದ ಮ್ಯಾಲ ಅದನ್ನ ಮರೀಲಿಕ್ಕೆ ಕುಡಿತಬಿಟ್ಟು ಬ್ಯಾರೆ ದಾರಿ ಏನದ? ಕೆಲಸಕ್ಕೆ ಸೇರಿದ ಮ್ಯಾಲ, ಆಫೀಸಿನ ಕಂಗೆಟ್ಟ ವಾತಾವರಣದೊಳಗ ಸಹೋದ್ಯೋಗಿಗಳು ತೋರಿಸಿದ ಸರಳ ಮಾರ್ಗ ಇದು. 'ಪುಕ್ಕಟು ರೊಕ್ಕ ಇಟಗೋಬಾರ್ದು. ಅದು ಪಾಪದ್ದು. ಕೊಂದ ಪಾಪ ತಿಂದು ಪರಿಹಾರ ಅಂತ ಕೇಳಿಯೇ ಇಲ್ಲೋ' ಎಂಬ ಉಪದೇಶ ಮನಸ್ಸಿಗೆ ಹಿತ ತಾರದೆ ಇರಲಿಲ್ಲ. ಇವತ್ತು ತಾನು ಖರ್ಚು ಮಾಡಿದರೆ ನಾಳೆ ಅಂವ, ನಾಡಿದ್ದು ಮತ್ತೊಬ್ಬ, ಯಾರದ್ದೋ ರೊಕ್ಕದೊಳಗ ಎಂಥ ಮಜ ಅಲ್ಲಾ, ಕಂಠಮಟ ಕುಡಿದರೂ ಉಪದೇಶ ತಪ್ಪುತ್ತಿರಲಿಲ್ಲ. 'ಅಲ್ಲಪಾ ಮಾರಾಯ ನೀನು ಸಂನ್ಯಾಸೀನೇ ಇರಬೋದು. ಆದರೆ ನಿನ್ನ ಹೆಂಡತೀನ ಕೇಳಿ ನೋಡು, ಅಕೀ–ದಾಗೀನೆ ಮಾಡಸ್ರೀ ಅಂತಾಳ. ಕಾರು ತಗೋರಿ ಅಂತಳ. ಮಹಡಿಮನಿ ಕಟ್ಟಿಸ್ರೀ ಅಂತಾಳ, ಏ.ಸಿ. ಹಾಕಸ್ರೀ ಅಂತಾಳ, ಅಯ್ಯೋ ಮಕ್ಕಳನ್ನು ಡಾಕ್ಟರು, ಎಂಜನಿಯರು ಮಾಡಬೇಕು– ಫಾರಿನ್ನಿಗೆ ಕಳಿಸಬೇಕು ಅಂತ ಒಂದಿವಸಾನರೇ ನಿಂಗೆ ಅನಿಸೇ ಇಲ್ಲೇನು? ಇದೆಲ್ಲ ಪುಕ್ಕಟದೊಳಗ ಆಗ್ತದ ಅಂತ ತಿಳದೀಯೇನು?'

ಒಂದೊಂದು ಸರ್ತಿ ಶರಣಪ್ಪ ದಾರ್ಶನಿಕನಂತೆ ಯೋಚಿಸುತ್ತಾನೆ. 'ಬಹುಶಃ ಈ ಆಫೀಸುಗಳ ಗಾಳೀನs ಹೀಂಗ, ಒಳಗ ಹೊಕ್ಕು ಒಂದೆರಡು ಸರ್ತಿ ಉಸಿರಾಡಿದ ಕೂಡ್ಲೆ ಮನುಷ್ಯಾನ ದೇಹದೊಳಗ ಅದೆಂಥಾ ಪರಿವರ್ತನೆ! ಮೈ ಉಬ್ಬುತ್ತದೆ. ತೊಟ್ಟುಕೊಂಡ ಅರಿವೆಗಳು ಉದುರುತ್ತವೆ. ಮನಸ್ಸು, ದಯೆ, ಕರುಣೆ ಕಳೆದುಕೊಂಡು ಕಲ್ಲಾಗುತ್ತದೆ. ನೋಟ ಬಿರುಸಾಗುತ್ತದೆ. ಸಂವೇದನೆಗಳಿಗೆ ಬರ ಬಂದುಬಿಡುತ್ತದೆ. ಕಂಡದ್ದನ್ನೆಲ್ಲ ಕಬಳಿಸುವ ಹಪ ಹಪ. ನೀಗದ ಹೊಟ್ಟೆ ಬಾಕತನ. ಒಂದೊಂದು ಸರ್ತಿ ಈ ತುತ್ತು ತನ್ನ ಬಾಯಿಗೆ ದೊಡ್ಡದು ಅನಿಸಿದರೂ, ಜೀರ್ಣಿಸಿಕೊಳ್ಳುವ ತನ್ನ ತಾಕತ್ತಿನ ಬಗ್ಗೆ ಅನುಮಾನ ಬಂದರೂ ಹೆಂಗಾರೂ ತಿಣುಕಿ ದಕ್ಕಿಸಿಕೊಂಡೇ ಬಿಡುವ ತವಕ.

★★★

ಆವತ್ತೂ ಹಿರಿಯ ಸಹೋದ್ಯೋಗಿ ಶಿವಪ್ಪನಿಗೆ ಒಂದು ಗಡವ ಪಾರ್ಟಿ ಬಂದು ಗಂಟು ಬಿತ್ತು. ಅದರ ಬಾಯಿ ಭಯಂಕರ ಗಡುಸು. ತನ್ನ ಕೆಲಸದ ಸಲುವಾಗಿ ದಿನಂಪ್ರತಿ ಆಫೀಸಿಗೆ ಅಡ್ಡಾಡಿ ಅವನ ತಲೆ ಕೆಟ್ಟು ಹೋಗಿರಬೇಕು. ಅಂವ ಕೊಡಬಾರ್ದು ಅನ್ನಾವ, ಇಂವ ಬಿಡಬಾರ್ದು ಅನ್ನಾವ. ಗಡವ ಧಾವಿಸಿ ಬಂದವನೇ ಟೇಬಲ್ಲಿಗೆ ಗುದ್ದಿ 'ನಿಮಗೆ ತಿನ್ನೋದು ಒಂದು ರೋಗ' ಎಂದು ಒಂದೇ ಸಮ ಕೂಗಾಡಲು ಸುರು ಮಾಡಿಬಿಟ್ಟ.

ಗಡವನ ಅವತಾರ ಕಂಡು ಶರಣಪ್ಪನ ಎದಿ ದಸಕ್ಕೆಂದರೂ ಶಿವಪ್ಪ ಮಾತ್ರ ಏನೂ ಅಳುಕಿದಂತೆ ಕಾಣಲಿಲ್ಲ. ಅವನು ತನ್ನ ಸರ್ವೀಸಿನೊಳಗ ಇಂಥ ಎಷ್ಟು ಜನರನ್ನು ನೋಡಿದ್ದನೋ, ಇನ್ನಷ್ಟು ಆರಾಮಾಗಿ ಕೂತು ಗಡವನ ಮಾರಿ ನೋಡತಾ 'ಹೌದಪಾ, ಇಲ್ಲಿನ ವಾತಾವರಣನs ಹೀಂಗ–ರೋಗ ಬರೋದೇ' ಅಂದ ನಿರಾಳವಾಗಿ.

'ದಿನಾ ಎಷ್ಟು ಶಗಣೀ ತಿಂತೀರೀ?' ಗಡವ ಕಣ್ಣು ಕೆಕ್ಕರಿಸಿದ.

ಇಂಥ ಮೂದಲಿಕೆಗೂ ಶಿವಪ್ಪ ವಿಚಲಿತನಾಗಲಿಲ್ಲ. 'ಹೌದಪಾ, ನೀ ಹೇಳೂ ಹಾಂಗ ಇದು ಶಗಣೀನs ಖರೆ. ಆದರೆ ಭವಿಷ್ಯದ ಬದುಕಿಗೆ ಗೊಬ್ಬರ ಆಗದೇ ಇರ್ತದಾ?'

ಗಲಾಟೆ ಕೇಳಿ ಆಫೀಸಿನವರೆಲ್ಲ ಎದ್ದು ಬಂದದ್ದು ನೋಡಿ ಶರಣಪ್ಪನೂ ವಿಧಿ ಇಲ್ಲದೆ ಅತ್ತ ಸಾಗಿದ. ಎಲ್ಲರೂ ತನ್ನನ್ನು ಕವಿದು ನಿಂತದ್ದು ಕಂಡು ಗಡವನಿಗೆ ಎದಿಗುದಿ ಆದದ್ದು ಸಹಜ.